ದಿಃ 03-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಜಿ.ಎನ್.ಆರ್ 1 ಮತ್ತು 4 ನೇ ಪ್ರತಿವಾದಿ ಪರ ವಕೀಲರಿಂದಃ

ವಾದಿಯು ಈ ದಾವೆಯನ್ನು ಪ್ರತಿವಾದಿಗಳ ಮೇಲೆ ಹೂಡಿದ್ದು ಪ್ರತಿವಾದಿಗಳ ಹೆಸರುಗಳು ನನಗೆ ಗೊತ್ತಿಲ್ಲ. ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಗುಟ್ಟೇನಹಳ್ಳಿಯ ನಿವಾಸಿಯಾಗಿರುವುದಿಲ್ಲ ಎಂದರೆ ಸರಿ. ನನ್ನ ಊರಿನಿಂದ ಗುಟ್ಟೇನಹಳ್ಳಿಗೆ 1.5 ಕಿ.ಮೀ ದೂರದಲ್ಲಿರುತ್ತದೆ. ಗುಟ್ಟೇನಹಳ್ಳಿಗೆ ಸೇರಿರುವ ಸರ್ವೆ ನಂಬರ್ ಗಳು ಹಾಗೂ ನಿವೇಶನ ಸಂಖ್ಯೆಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನಾನು ಓದಿರುವುದಿಲ್ಲ. ವಾದಿಯ ತಂದೆಯ ಹೆಸರು ಸುಂಕಪ್ಪ. ನಿಪಿ-2 ರ ಕ್ರಯ ಪತ್ರಕ್ಕೆ ಸಂಬಂಧಪಟ್ಟ ಆಸ್ತಿಯ ಚೆಕ್ಕುಬಂದಿ ಪೂ-ದ ಪಹರೆ ಗೋಡೆ, ಪ- ಪೆದ್ದಣ್ಣ ಹಾಗೂ ಉ- ಅವರದ್ದೆ ಮನೆ ಎಂದು ನಿಪಿ-2 ರಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನಿಪಿ-2 ಕ್ಕೆ ಸಂಬಂಧಪಟ್ಟ ಆಸ್ತಿಯ ವಿಸ್ತೀರ್ಣ ಪೂ-ಪ 10 ಗಜ ಹಾಗೂ ಉ-ದ 16 ಗಜ ಎಂದು ನಿಪಿ-2 ರಲ್ಲಿ ಬರೆದಿದೆ ಎಂದರೆ ಸರಿ. ನಿಪಿ-2 ರ ಕ್ರಯ ಪತ್ರವು ಗುಟ್ಟೇನಹಳ್ಳಿಯ ಸರ್ವೆ ನಂ. 1 ಕ್ಕೆ ಸಂಬಂಧಪಟ್ಟ ಕ್ರಯ ಪತ್ರವಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಕ್ರಯ ಪತ್ರದಲ್ಲಿ ನಮೂದಿಸಿರುವ ಆಸ್ತಿಯ ವಿಸ್ತೀರ್ಣವೇ ಊರಿನಲ್ಲಿ ಸದರಿ ಆಸ್ತಿಯ ವಿಸ್ತೀರ್ಣವಾಗಿರುತ್ತದೆ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟ ಋಣಭಾರ ಪ್ರಮಾಣ ಪತ್ರವನ್ನು ತೋರಿಸಿ ಸಾಕ್ಷಿಯು ಅದರಲ್ಲಿ ಸರ್ವೆ ನಂ.1 ರ ವಟಾರದ ವಿಸ್ತೀರ್ಣ 10*16 ಗಜ ಎಂದು ನಮೂದು ಮಾಡಿರುವುದನ್ನು ಗುರುತಿಸಿದ್ದು ಸದರಿ ಋಣಭಾರ ಪ್ರಮಾಣ ಪತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರ ಋಣಭಾರ ಪ್ರಮಾಣ ಪತ್ರವು ನಿಪಿ-2 ರ ಕ್ರಯ ಪತ್ರಕ್ಕೆ ಸಂಬಂಧಪಟ್ಟ ದಾಖಲೆಯಾಗಿರುತ್ತದೆ ಎಂದರೆ ಸರಿ.

ಸಾಮಾನ್ಯವಾಗಿ ನೋಂದಾಯಿತ ದಾಖಲೆಗೆ ಖಾತೆಗಳು ಹೊಂದಾಣಿಕೆಯಾಗುತ್ತವೆ ಎಂದರೆ ಸರಿ. ನೊಂದಾಯಿತ ದಾಖಲೆಯಲ್ಲಿ ನಮೂದಿಸಿರುವ ಖಾತೆ ಸಂಖ್ಯೆಯೇ ಇತರೆ ದಾಖಲೆಗಳಲ್ಲಿಯೂ ಹೊಂದಾಣಿಕೆ ಆಗುತ್ತವೆ ಎಂದರೆ ಸರಿ. ಖಾತೆ ಸಂಖ್ಯೆ 1 ಯಾವುದೇ ಕಾರಣ ಇಲ್ಲದೆ ಖಾತೆ ಸಂಖ್ಯೆ 64 ಎಂದು ಬದಲಾಗುವ ಸಾಧ್ಯತೆ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಅಸಲಿಗೆ 4 ನೇ ಪ್ರತಿವಾದಿಯ ತಾತನಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯೇ ಗ್ರಾಮಪಂಚಾಯಿತಿಯ ಖಾನೆಶುಮಾರಿ ದಾಖಲೆಯಲ್ಲಿಯೂ ಸಹ ನಮೂದಾಗಿದೆ ಎಂದರೆ ಸರಿ. ವಾದಿಯು ನನಗೆ ತಪ್ಪು ಮಾಹಿತಿಗಳನ್ನು ನೀಡಿ

ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಕರಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಸತ್ಯಕ್ಕೆ ದೂರವಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು